ಇ)

	೧೯೮೯-೯೬	೧೯೯೬-೯೭	೧೯೯೭-೯೮
ಖಾಸಗಿ	೨	೮೭	೩೬
ಮೆಟ್ರಿಕ್ ನಂತರ	೧	—	—

ಈ)

	೧೯೯೩-೯೪
ಸರ್ಕಾರಿ ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳ ವಿದ್ಯಾರ್ಥಿಗಳ ಸಂಖ್ಯೆ	೩೩೬೪
ಖಾಸಗಿ ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳ ಸಂಖ್ಯೆ	೧೧೧೭೭
ಸರ್ಕಾರಿ ಮೆಟ್ರಿಕ್‌ನಂತರ ಹಾಸ್ಟೆಲ್	೬೫೪೦
ಖಾಸಗಿ ಕಾಲೇಜ್ ಹಾಸ್ಟೆಲ್	೨೮೩೫
ಒಟ್ಟು	೫೪೨೪೬

ಉ) ಇಲ್ಲ.

ಊ) ಸಹಾಯಧನವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅಂಗವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಪಾಸು ನೀಡುವಿಕೆ

೮೬೩. ಶ್ರೀ ಕೆ. ಕುಶಾಲ, (ಸುಳ್ಯ).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಂಗ ವಿಕಲರಿಗೆ ಕರ್ನಾಟಕ ರಾಜ್ಯ ರಸ್ತೆಸಾರಿಗೆ ಸಂಸ್ಥೆ ರಾಜ್ಯಾದಂತ ಪ್ರಯಾಣಕ್ಕೆ ಪಾಸು ನೀಡುವ ಪ್ರಸ್ತಾಪವು ಯಾವ ಹಂತದಲ್ಲಿದೆ ? ಇವರಿಗೆ ಬಸ್ಸಿನ ಪಾಸು ನೀಡಲಾಗುವುದೇ ?

ಆ) ಸದ್ರಿ ಅಂಗವಿಕಲರಿಗೆ ಪ್ರಯಾಣಿಸುವ ಬಸ್ಸಿನಲ್ಲಿ ಕುಳಿತುಕೊಳ್ಳಲು ಸೀಟು ಇಲ್ಲದಿರುವಾಗ ಆಗುವ ತೊಂದರೆಯನ್ನು ತಪ್ಪಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ಮಹಿಳೆಯರಿಗೆ ನಿಗಧಿ ಪಡಿಸಿರುವ ಹಾಗೆ ಅಂಗವಿಕಲರಿಗಾಗಿ ಕಾದಿರಿಸಿದ ಸೀಟು ಎಂದು ನಿಗಧಿಪಡಿಸಲಾಗುವುದೇ ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಅಂಧರಿಗೆ ಬಿಟ್ಟು ಅಂಗವಿಕಲರಿಗೆ ಪಾಸುಗಳನ್ನು ಕೊಡಲಾಗುತ್ತಿಲ್ಲ.

ಆ) ಅಂಗವಿಕಲರಿಗೆ ಪ್ರತ್ಯೇಕವಾಗಿ ಸೀಟುಗಳನ್ನು ಕಾಯ್ದಿರಿಸಲು ಸಾಧ್ಯವಾಗುವುದಿಲ್ಲ.

ಅರಭಾವಿಯಲ್ಲಿ ಹೈನುಗಾರಿಕೆ ತಾಂತ್ರಿಕ ತರಬೇತಿ ಪ್ರಾರಂಭ

೮೬೪. ಶ್ರೀ ಆರ್. ಎಂ. ಪಾಟೀಲ್ (ಅರಭಾವಿ).—ಮಾನ್ಯ ರೇಷ್ಮೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಸರ್ಕಾರಿ ಅರಭಾವಿ ಒಕ್ಕಲುತನ ಕೇಂದ್ರದಲ್ಲಿ ಹೈನುಗಾರಿಕೆ ತಾಂತ್ರಿಕ ತರಬೇತಿ ಪ್ರಾರಂಭಿಸುವ ವಿಚಾರ ಸರ್ಕಾರದಲ್ಲಿದೆಯೇ ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಮಂತ್ರಿಗಳು).—

ಇಲ್ಲ ಸ್ವಾಮಿ